ಕೇಳಿದ್ದೀರಿ. ಆ ಪ್ರಶ್ನೆಯನ್ನು ತಾವು ಕೇಳಿಲ್ಲ.

ಶ್ರೀ ಹೆಚ್.ಶಿವಪ್ಪ: ಅಧ್ಯಕ್ಷರೇ, he should have anticipated these supplementaries ಇದು ಮೈನ್ ಕೊಶ್ಚನ್‌ಗೆ ಕನೆಕ್ಟೆಡ್ ಇದೆಯಲ್ಲಾ.

ಶ್ರೀ ಶರಣಬಸಪ್ಪಾ ದರ್ಶನಾಪೂರ್: ಓವರ್ ಆಲ್ಲ 4,700 ಜನರಿಗೆ ವರ್ಗಾವಣೆ ಮಾಡಿದ್ದೇವೆ ಎಂದು ಹೇಳಿದ್ದೇನೆ. ಉಳಿದ ಮಾಹಿತಿ ಏನು ಇದೆ ಯಾರು ಯಾರು ಯಾವ ಯಾವ ಕೆಟೆಗರಿಯಲ್ಲಿ ಎಷ್ಟು ಜನ ಟ್ರಾನ್ಸ್‌ಫರ್ ಆಗಿದ್ದಾರೆ ಎಂದು ಏನು ಕೇಳಿದ್ದಾರೆ ಅದರ ಬಗ್ಗೆ ಸಮರ್ಪಕವಾದ ಮಾಹಿತಿಯನ್ನು ಸಂಜೆಯೊಳಗೆ ಒದಗಿಸುತ್ತೇನೆ. ಅಂದರೆ ಜೂನಿಯರ್ ಇಂಜಿನಿಯರ್, ಅಕೌಂಟ್ಸ್ ಸೂಪರಿಂಟೆಂಡೆಂಟ್, ಲೈನ್‌ಮೆನ್, ಸ್ಟೇಶನ ಅಡೆಂಡೆಂಟ್ ಹೀಗೆ ಯಾರು ಯಾರು ಯಾವ ಯಾವ ಕೆಟೆಗರಿಗೆ ಎಷ್ಟೆಷ್ಟು ಜನ ವರ್ಗಾವಣೆಯಾಗಿದ್ದಾರೆಂದು ಒಂದು ಉದ್ದದ ಪಟ್ಟಿಯನ್ನು ಮಾಡಿ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ವಿಷಯ: ನಂದಿನಿ ಬಡಾವಣೆಯ ಕಂದಾಯ ನಿವೇಶನದಾರರ ಸಮಸ್ಯೆಗಳು

538 (3365)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಂದಿನಿ ಲೇಔಟ್ ಎಂ.ಬಿ.ಡಿ.ಎ ಬಡಾವಣೆ ಇದೆಯೇ?

ಆ) ಈ ಬಡಾವಣೆಯನ್ನು ಎಂದು ಪೂರ್ಣಗೊಳಿಸಲಾಯಿತು?

ಇ) ಎಷ್ಟು ನಿವೇಶನಗಳನ್ನು ಹಂಚಲಾಗಿದೆ?

ಈ) ಈ ಬಡಾವಣೆಯಲ್ಲಿ ರೆವಿನ್ಯೂ ನಿವೇಶನದಾರರ ತಕರಾರುಗಳು: ದಾವೆಗಳು ಎಷ್ಟು ಇವೆ?

ಉ) ಈ ಬಡಾವಣೆಗಳು ರೆವಿನ್ಯೂ ನಿವೇಶನವಾರು ಸಮಸ್ಯೆಗಳನ್ನು ಪರಿಹರಿಸಲು ಏನು ಕ್ರಮ ಜರುಗಿಸಲಾಗಿದೆ?

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):

ಅ) ಹೌದು. ಯಲಹಂಕ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಂದಿನಿ ಲೇಔಟ್ ಎಂಬ ಬಡಾವಣೆ ಇದೆ.

ಆ) ಈ ಬಡಾವಣೆಯನ್ನು 1988ರಲ್ಲಿ ಪೂರ್ಣಗೊಳಿಸಲಾಯಿತು.

ಇ) 887 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಈ) ರೆವಿನ್ಯೂ ನಿವೇಶನದಾರರು ಹೂಡಿದ್ದ 34 ರಿಟ್ ಅರ್ಜಿಗಳು ಹಾಗೂ 98 ಮೂಲ ದಾವೆಗಳು ಬಾಕಿ ಇರುತ್ತದೆ.

ಉ) ಮೂಲ ರೆವಿನ್ಯೂ ನಿವೇಶನದಾರರು ನಿವೇಶನಗಳನ್ನು ಮರು ಮಂಜುರಾತಿ ಮಾಡಲು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಬಹುತೇಕ ರೆವಿನ್ಯೂ ನಿವೇಶನಾದರರು ಅನಧಿಕೃತ ಮನೆಗಳನ್ನು ನಿರ್ಮಿಸಿರುತ್ತಾರೆ. ಹಾಗೂ ಕೆಲವರು ಪ್ರಾಧಿಕಾರದ ನಿವೇಶನಗಳನ್ನು ಒತ್ತುವರಿ ಮಾಡಿರುತ್ತಾರೆ. ಚಾಲ್ತಿಯಲ್ಲಿರುವ ಪ್ರಾಧಿಕಾರದ ನಿಯಮಗಳ ಪ್ರಕಾರ ಮೂಲ ರೆವಿನ್ಯೂ ನಿವೇಶನದಾರರಿಗೆ ಮರು ಮಂಜೂರಾತಿ ಮಾಡಲು ಅವಕಾಶ ವಿರುವುದಿಲ್ಲ.

ಶ್ರೀ ಎನ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೇ ನನ್ನ ಪ್ರಶ್ನೆಗೆ 887ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ 1988ನೇ ಇಸ್ವಿಯಲ್ಲಿ ಪೂರ್ಣಗೊಳಿಸಲಾಯಿತು ಅಲ್ಲಿ ಬಹುತೇಕ ರೆವಿನ್ಯೂ ನಿವೇಶನದಾರರು ಅನಧಿಕೃತ ಮನೆಗಳನ್ನು ನಿರ್ಮಿಸಿರುತ್ತಾರೆ ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಪ್ರಶ್ನೆ, ಈ ಬಡಾವಣೆ ನಿರ್ಮಿಸಬೇಕು ಎಂದು ಪ್ರಿಲಿಮಿನರಿ ನೋಟಿಫಿಕೇಷನ್ ಆಗಿದ್ದು ಯಾವಾಗ? ಫೈನಲ್ ನೋಟಿಫಿಕೇಷನ್ ಯಾವಾಗ ಆಯಿತು? ಅವಾರ್ಡ್ ಪಾಸ್ ಮಾಡಿದ್ದು ಯಾವಾಗ? ಪ್ರಿಲಿಮಿನರಿ ನೋಟಿಫಿಕೇಷನ್‌ದಿಂದ ಅವಾರ್ಡ್‌ವರೆಗೆ ಎಷ್ಟು ಟೈಮ್ ಹಿಡಿಯಿತು. 887 ಹಂಚಿಕೆದಾರರ ಪೈಕಿ ಅಲ್ಲಿ ಎಷ್ಟು ಜನರಿಗೆ ಮನೆ ಕಟ್ಟಲಿಕ್ಕೆ ಸಾಧ್ಯವಾಯಿತು?

ಶ್ರೀ ಅನಂತ್‌ನಾಗ್: ಸನ್ಮಾನ್ಯ ಸಭಾಧ್ಯಕ್ಷರೆ 1979ರಲ್ಲಿ ಸುಮಾರು 786ಎಕರೆ 10 ಗುಂಟೆಗಳನ್ನು ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿ 1988ರಲ್ಲಿ ಎಲ್ಲಾ ಕೆಲಸಗಳನ್ನು ಮುಗಿಸಿ 2353 ಸೈಟ್‌ಗಳನ್ನು ನಿರ್ಮಾಣ ಮಾಡಬೇಕೆಂದು ಕ್ರಮವನ್ನು ಕೈಗೊಂಡಿತ್ತು. ಆದರೆ ಸಾಧ್ಯವಾದದ್ದು 887 ಸೈಟ್ ಮಾತ್ರ; ಅದರ ಬಗ್ಗೆ ಉತ್ತರದಲ್ಲಿ ಹೇಳಿದ್ದೇವೆ. ಅಲ್ಲಿ ಏನಾಗಿದೆ ಎಂದರೆ ರೆವೆನ್ಯೂ ಸೈಟ್‌ಗಳ ಓನರ್‌ಗಳು ರೆವೆನ್ಯೂ ಸೈಟ್‌ಗಳಲ್ಲಿ ಅನೇಕ ಮನೆಗಳನ್ನು ಅನಧಿಕೃತವಾಗಿ ಕಟ್ಟಿದ್ದಾರೆ. ನಾವು ಬಿ.ಡಿ.ಎ.ದಿಂದ ಯಾರಿಗೆ ಅಲಾಟ್‌ಮೆಂಟ್ ಮಾಡಿದ್ದೇವೆ ಅದನ್ನು ಅವರು ಪಡೆಯುವುದಕ್ಕೆ ಆಗಲಿಲ್ಲ. ಏಕೆಂದರೆ ಅಲ್ಲಿ ಅನಧಿಕೃತ ಮನೆಗಳು ಇವೆ. ಇವರು ಅಲ್ಲಿ ಹೋದಾಗ ಅಲ್ಲಿ ಗಲಾಟೆ, ಹೊಡೆದಾಟ, ಬಡಿದಾಟ, ಹೆದರಿಸುವುದು, ಬೆದರಿಸುವುದು ಎಲ್ಲಾ ನಡೆದುಕೊಂಡು ಬಂದಿದೆ. ನಾವು ಅನೇಕ ಕಡೆ ಅನಧಿಕೃತ ಕಟ್ಟಡಗಳನ್ನು ಹೇಗೆ ರೆಗ್ಯುಲರೈಸ್ ಮಾಡಿಕೊಟ್ಟಿದ್ದೇವೆ ಹಾಗೆ ನಮಗೂ ರೆಗ್ಯುಲರೈಸ್ ಮಾಡಿಕೊಡಿ ಎಂದು ಹೇಳಿ ಅಲ್ಲಿಯ ಜನ ಹಿಂದೆ ನಮ್ಮ ಸನ್ಮಾನ್ಯ ದೇವೇಗೌಡರು ಮುಖ್ಯಮಂತ್ರಿಯವರಿದ್ದಾಗ ಬಂದು

ಕೇಳಿದ್ದರು. ಆಗ ಅದರ ಮೇಲೆ ಸ್ಟೇ ಕೊಡಲಾಗಿತ್ತು. ಆ ಸ್ಟೇ ಇವೊತ್ತಿಗೂ ಮುಂದುವರಿಯುತ್ತಿದೆ. ಅಲ್ಲಿದ್ದ ರೆವೆನ್ಯೂ ಸೈಟ್ ಓನರ್ಸ್ ನಮಗೆ ರಿಕ್ವೆಸ್ಟ್ ಮಾಡಿಕೊಂಡು ಮಾಡಿಕೊಡಿ ಎಂದು ಕೇಳಿದ್ದಾರೆ. ರೀಕನ್ವೆಯೆನ್ಸ್, ಫ್ರಾಮ್ 20. 12. 1973ದಿಂದ 8. 5. 1986 ಇಲ್ಲಿಯವರೆಗೆ ರೀಕನ್ವೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದರ ನಂತರ ಕಾನೂನಿನ ತೊಂದರೆ ಬರುವುದರಿಂದ ಅದನ್ನು ಮಾಡುವುದಕ್ಕೆ ಆಗುತ್ತಿಲ್ಲ. ಆದರೂ ಕೂಡ ಇದು ನಮ್ಮ ಸರ್ಕಾರದ ಪರಿಶೀಲನೆಯಲ್ಲಿದೆ. ಏಕೆಂದರೆ ಇತ್ತಕಡೆ ಕೆಲವು ಸೈಟ್ ಓನರ್ಸ್ ಯಾರು ಇದ್ದಾರೆ ಅವರೂ ಕೂಡ ಬಂದು ನಮಗೆ ಬೇರೆ ಕಡೆ ಅಲಾಟ್‌ಮೆಂಟ್ ಮಾಡಿ, ಆಲ್ಟರ್‌ನೇಟಿವ್ ಸೈಟ್ ಕೊಡಿ ಎಂದು ಕೇಳುತ್ತಿದ್ದಾರೆ, ಇಲ್ಲ ಅವರು ಕಟ್ಟಿರುವ ಮನೆಗಳನ್ನು ಒಡೆದು ಸೈಟ್ ಕೊಡಿ ಎಂದು ಕೇಳುತ್ತಿದ್ದಾರೆ. ಇತ್ತ ಕಡೆ ನಾವು ಈಗಾಗಲೇ ಮನೆಗಳನ್ನು ಕಟ್ಟಿಕೊಂಡಿದ್ದೇವೆ ಸುಮಾರು ಸಾವಿರ ರೂಪಾಯಿ ಖರ್ಚು ಮಾಡಿದ್ದೇವೆ, ನಮಗೂ ಕೂಡ ಬೇರೆ ಕಡೆ ಹೋಗುವುದಕ್ಕೆ ಗತಿ ಇಲ್ಲ. ಆದ್ದರಿಂದ ಇದೊಂದು ಮಾನವೀಯ ಪ್ರಶ್ನೆಯಾಗಿರುವುದರಿಂದ ಸರ್ಕಾರ ಕೂಡ ಇದರ ಬಗ್ಗೆ ಅನೇಕಸಾರಿ ಇದರ ಬಗ್ಗೆ ಚಿಂತನೆ ಮಾಡಿದೆ. ಪದೇ ಪದೇ ಗಲಾಟೆಯಾಗುತ್ತಿರುವುದರಿಂದ ಅವರನ್ನು ಕೂಡ ನಾವು ಕರೆದುಕೊಂಡು ಹೋಗಿ ನ್ಯಾಯಯುತವಾಗಿ, ಶಾಂತಿಯುತವಾಗಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ಅದು ಸಾಧ್ಯವಾಗಲಿಲ್ಲ. ಮಾನ್ಯ ಸದಸ್ಯರು ಮತ್ತೆ ಇದನ್ನು ನನ್ನ ಗಮನಕ್ಕೆ ತಂದಿದ್ದಾರೆ ನಾನು ಮುಖ್ಯಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸುತ್ತೇನೆ. ಮತ್ತು ಅಧಿಕಾರಿಗಳನ್ನು, ರೆವೆನ್ಯೂ ಸೈಟ್ ಓನರ್ಸ್‌ಗಳ ಪ್ರತಿನಿಧಿಗಳನ್ನು ಕರೆಸಿ ನ್ಯಾಯಯುತವಾಗಿ, ಶಾಂತಿಯುತವಾಗಿ ಈ ಸಮಸ್ಯೆಯನ್ನು ತ್ವರಿತವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾಡುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಸಭಾಧ್ಯಕ್ಷರೆ, ಸಚಿವರ ಹೇಳಿಕೆಯಲ್ಲಿ ಕೆಲವು ಸತ್ಯಕ್ಕೆ ದೂರವಾದ ಸಂಗತಿಗಳು ಕಾಣಿಸಿಕೊಂಡಿವೆ. ಪ್ರಿಲಿಮಿನರಿ ನೋಟಿಫಿಕೇಷನ್ ಆಗಿದ್ದು 1976ನೇ ಇಸ್ವಿಯಲ್ಲಿ, ಫೈನಲ್ ನೋಟಿಫಿಕೇಷನ್ ಆಗಿದ್ದು 1979ನೇ ಇಸ್ವಿಯಲ್ಲಿ. 1986ನೇ ಇಸ್ವಿಯಲ್ಲಿ ಅವಾರ್ಡ್ ಪಾಸು ಮಾಡಿಸಿದ್ದೀರಿ. ಏಳು ವರ್ಷದ ನಂತರ ಅವಾರ್ಡ್ ಪಾಸ್ ಆಗಿದೆ. 1984ನೇ ಇಸ್ವಿಯಲ್ಲಿ ಲ್ಯಾಂಡ್ ಅಕ್ವಿಸೇಷನ್ ಆಫೀಸರ್‌ರವರು ಅಂದಿನ ಚೇರ್ಮನ್‌ರವರಿಗೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಆ ಜಾಗದಲ್ಲಿ 900ಕ್ಕೂ ಹೆಚ್ಚಿನ ಮನೆಗಳು, ದೇವಸ್ಥಾನಗಳು, ಶಾಲೆಗಳು ಅಲ್ಲಿ ನಿರ್ಮಾಣ ಆಗಿವೆ, 2056ಜನ ರಿಜಿಸ್ಟರ್ಡ್ ಡಾಕ್ಯೂಮೆಂಟ್ ಮೂಲಕ ಮಾಲೀಕರಾಗಿದ್ದಾರೆ ಎಂದು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಹಾಗಿದ್ದಾಗ್ಯೂ ನೀವು ನಿವೇಶನವನ್ನು ಹೇಗೆ ಹಂಚಿದಿರಿ? ಒಂದು ಪ್ರಿಲಿಮಿನರಿ ಅವಾರ್ಡ್‌ಗೆ ಇಷ್ಟು ಟೈಮ್ ಏಕೆ ಹಿಡಿಯಿತು? ಈ ನಡುವೆ ಅನಧಿಕೃತ ಕಟ್ಟಡಗಳಿಗೆ ನಿಮ್ಮದೇ ಆದ ಅಧಿಕಾರಿಗಳು ಅದಕ್ಕೆ ಪ್ರೋತ್ಸಾಹವನ್ನು

ಕೊಟ್ಟಿದ್ದಾರೆ. ಇವೊತ್ತು ರೆವೆನ್ಯೂ ನಿವೇಶನದಾರರೂ ಉದ್ಧಾರ ಆಗುತ್ತಿಲ್ಲ, ಹಂಚಿಕೆದಾರರೂ ಉದ್ಧಾರ ಆಗುತ್ತಿಲ್ಲ, ಆದರೆ ಉದ್ಧಾರ ಆಗಿದ್ದು ನಿಮ್ಮ ಅಧಿಕಾರಿಗಳು, ನಿಮ್ಮ ಇಂಜಿನಿಯರ್ಸ್, ಆದರೆ ಅವರು ಇವೊತ್ತು ತಪ್ಪಿಸಿಕೊಳ್ಳುತ್ತಿದ್ದಾರೆ, ಇವೊತ್ತು ಹೇಗಾಗಿದೆ ಎಂದರೆ ಕೊಟ್ಟವನು ಕೋಡಂಗಿ, ಈಸಕೊಂಡವನು ಈರಭದ್ರ, ಅಂತಹ ಪರಿಸ್ಥಿತಿ ಬಂದಿದೆ. ಆದರೆ ನನ್ನ ಪ್ರಶ್ನೆ ಏನು ಎಂದರೆ ಈ ಬಡಾವಣೆಗಳಲ್ಲಿ ರೆವೆನ್ಯೂ ನಿವೇಶನದಾರರಿಗೆ ಪ್ರೋತ್ಸಾಹಿಸಲು ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ ಉತ್ತರ ಇಲ್ಲ ಎಂದು ಕೊಟ್ಟಿದ್ದೀರಿ. ಮರು ಮಂಜೂರಾತಿ ಮಾಡಲು ಅವಕಾಶ ಇಲ್ಲ ಎಂದು ಹೇಳಿದ್ದೀರಿ. ತಮಗೆ ಗೊತ್ತಿದೆ ಇವೊತ್ತು ಹಂಚಿಕೆದಾರರು ಅಲ್ಲಿ ಹೋಗಿ ಕೂಡುವುದಕ್ಕೆ ಆಗುವುದಿಲ್ಲ. ಇದು ಬರೀ ನಂದಿನಿ ಲೇ ಔಟ್ ಸಮಸ್ಯೆ ಅಲ್ಲ. ಬೆಂಗಳೂರಿನ ಸುತ್ತಮುತ್ತ ಅದು ಹೆಚ್‌ಬಿಆರ್ ಇರಬಹುದು ಯಾವುದೇ ಲೇಔಟ್ ಇರಬಹುದು ಅಲ್ಲಿ ಹಂಚಿಕೆದಾರರಿಗೆ ಕಟ್ಟುವುದಕ್ಕೆ ಬಿಡುತ್ತಿಲ್ಲ. ಏನೋ ಬಿ.ಡಿ.ಎ. ಸೈಟು ಸಿಗುತ್ತದೆಂದು ಅವರು ಜೀವನದಲ್ಲಿ ದುಡಿದಿದ್ದ ಹಣವನ್ನು ಕಟ್ಟಿ ಸೈಟನ್ನು ಕೊಂಡುಕೊಂಡಿರುತ್ತಾರೆ. ಮೂಲ ನಿವಾಸಿಗಳು ಕೂಡ ನಮಗೆ ಅದು ಬಿಟ್ಟರೆ ಪರಿಹಾರ ಇಲ್ಲವೆಂದು ಹೇಳುತ್ತಿದ್ದಾರೆ ಅದು ಕೂಡ ನಿಜ. ಅದಕ್ಕಾಗಿ ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡಬೇಕು. ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ 29ನೇ ಫೆಬ್ರವರಿ1988ನೇ ಇಸ್ವಿಯಲ್ಲಿ ಬಿ.ಡಿ.ಎ.ಮೂಲಕ 476 ಮನೆಗಳನ್ನು ಒಡೆದು ಹಾಕಿದ್ದಾರೆ. ಬುಲ್ಡೋಜರನ್ನು ತೆಗೆದುಕೊಂಡು ಹೋಗಿ ಆ ಅನಧಿಕೃತ ಮನೆಗಳನ್ನು ಒಡೆದು ಹಾಕಿದ್ದಾರೆ. ಈಗ 9 ವರ್ಷವಾಗಿದೆ. ಈಗ ನೀವು ಏನು ಹೇಳಿದ್ದರಲ್ಲಾ ಶಾಂತಿಯುತವಾಗಿ, ನ್ಯಾಯಯುತವಾಗಿ ಎಂದು ಅದು ಮೊದಲು ಮಾಡಿ. ನಂದಿನಿ ಲೇ ಔಟಿನ ನಿವೇಶನ ಹಂಚಿಕೆದಾರರಿಗೆ ಹಾಗೂ ಅಲ್ಲಿನ ರೆವೆನ್ಯೂ ನಿವೇಶನದಾರರಿಗೆ ದೈನಂದಿನ ಸಮಸ್ಯೆಯಾಗಿದೆ. ಆ ಸಮಸ್ಯೆಗೆ ಪರಿಹಾರ ಏನು? ಅದು ದಿವಸ ಹತ್ತಿಕೊಂಡು ಉರಿಯುತ್ತಿದೆ.

ಶ್ರೀ ಅನಂತ್‌ನಾಗ್: ಮಾನ್ಯ ಉಪಾಧ್ಯಕ್ಷರೆ, ಅನೇಕ ಸಲ ಈ ವಿಚಾರಕೋಸ್ಕರ ಸಭೆಗಳನ್ನು ಕರೆಯಿಸಿ ಮಾತನಾಡಿ ಬಗೆಹರಿಸಲು ಆಗಲಿಲ್ಲ. ಯಾವ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ ಅದರಲ್ಲಿ ಸತ್ಯಾಂಶ ಇದೆ. ನಾನು ಹೇಳುವುದರಲ್ಲಿ 76-79ರಲ್ಲಿ ತಪ್ಪು ಆಗಿರಬಹುದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದನ್ನು ಮಾನವೀಯತೆಯ ದೃಷ್ಟಿಯಿಂದ ಬಗೆಹರಿಸಬೇಕು. ಮಾನ್ಯ ನಂಜೇಗೌಡರು ಹೇಳಿದಹಾಗೆ ಅಲಾಟ್‌ಮೆಂಟ್‌ನಲ್ಲಿ ಯಾರಿಗೂ ಅನ್ಯಾಯವಾಗದಂತೆ ಉದಾಹರಣೆಗೆ ಎಷ್ಟೋ ಸೈಟ್‌ಗಳನ್ನು ಕೋ-ಆಪ್‌ರೇಟಿವ್ ಸೊಸೈಟಿಯಿಂದ ತೆಗೆದುಕೊಂಡು ಬಂದು ಯಾರು ವ್ಯವಹಾರ ಮಾಡಿದ್ದಾರೆ ಅವರು ಲಾಭ ಪಡೆದುಕೊಂಡಿದ್ದಾರೆ. ಯಾರಿಗೆ ಸೈಟ್ಸ್‌ಗಳನ್ನು ಕೊಟ್ಟಿದ್ದಾರೆ ಅವು ಅವರಿಗೆ ಸಿಕ್ಕಿಲ್ಲ. ಲಕ್ಷಾಂತರ ಬಡಜನ, ಮಧ್ಯಮ ವರ್ಗದ ಜನ ಅದರಿಂದ ನೋವನ್ನು ಉಂಡಿದ್ದಾರೆ. ತಪ್ಪು ಆಗಿದೆ ಅದನ್ನು ನಾನು

ಒಪ್ಪಿಕೊಳ್ಳುತ್ತೇನೆ. ಈ ಸಮಸ್ಯೆಯನ್ನು ಮಾನವೀಯ ರೀತಿಯಲ್ಲಿ ಇನ್ನು 60 ದಿವಸಗಳಲ್ಲಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇದು ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಬರುವಂತಹದ್ದು ಯಲಹಂಕದ ಪಕ್ಕದಲ್ಲಿ. ಆದರೆ ಇದನ್ನು ತಕ್ಷಣ ಬಗೆಹರಿಸಲು ಆಗಲಿಲ್ಲ. ಅನೇಕ ವರ್ಷಗಳಿಂದ, for the very fact that it has been pending for such a long time, ಆದ್ದರಿಂದ ಇದನ್ನು ತೀವ್ರವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಛೇರ್ಮನ್: ಅದನ್ನು ಕಾನೂನು ಪ್ರಕಾರ ಮಾಡಲು ಸಾಧ್ಯವಿದ್ದರೆ, ಆ ವಿಷಯದ ಬಗ್ಗೆ ಮೀಟಿಂಗ್ ಮಾಡುವಾಗ ಅವರನ್ನು ಸೇರಿಸಿಕೊಂಡರೆ ಒಳ್ಳೆಯದಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಿಡಿಎನಲ್ಲಿ ಹತ್ತಾರು ವರ್ಷಗಳಿಂದ ದುಡ್ಡು ಕೊಟ್ಟು ಸೈಟ್ ತೆಗೆದುಕೊಂಡವರಿಗೆ ಸೈಟ್ ಅಲಾಟ್‌ಮೆಂಟ್ ಮಾಡುವಲ್ಲಿ ಆದ ಅನ್ಯಾಯದ ಬಗ್ಗೆಸಾವಿರಾರು ಕೇಸ್‌ಗಳಿವೆ. ಹೈಕೋರ್ಟ್‌ನಲ್ಲಿ ರೀಕನ್ವೆಯನ್ಸ್ ಮಾಡಬಾರದು ಎಂಬ ಆದೇಶ ಇದ್ದರೂ ಸಹ ತಾವು ರೀಕನ್ವೆಯನ್ಸ್ ಮಾಡುತ್ತಿದ್ದೀರಿ. ಇವತ್ತು ಬಿಡಿಎ ದಲ್ಲಿ ಸೈಟ್ ಹಂಚಲು ಸ್ವಾಧೀನಪಡಿಸಿಕೊಳ್ಳುವಂಥದನ್ನು ರೀಕನ್ವೆಯನ್ಸ್ ಮಾಡುವಂಥದ್ದು, ಅದೇ ಖಾಸಗಿ ಕೋ-ಆಪ್‌ರೇಟಿವ್ ಹೌಸಿಂಗ್ ಬೇಕಾದ್ದು ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು. ಇವರು ಏನು ತಪ್ಪು ಮಾಡಿದ್ದರು? ಇವರು ತಮ್ಮ ಜೀವನದಲ್ಲಿ ದುಡಿದಿದ್ದ ಅಲ್ಪ-ಸ್ವಲ್ಪ ಹಣ ಕೊಟ್ಟು ಒಂದು ಸೈಟ್ ಪಡೆದುಕೊಂಡು ಮನೆ ಕಟ್ಟಬೇಕು ಎಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರಲ್ಲಾ, ಅವರಿಗೆ ನ್ಯಾಯ ಒದಗಿಸಿ ಕೊಡುವುದು ನಿಮ್ಮ ಧರ್ಮವಲ್ಲವೇ? ಈ ದಿಕ್ಕಿನಲ್ಲಿ ಏನಾದರೂ ಪ್ರಾಮಾಣಿಕ ಪ್ರಯತ್ನವಾಗಿದೆಯೆ?

ಶ್ರೀ ಎಂ.ಶ್ರೀನಿವಾಸ್: ನಂದಿನಿ ಬಡಾವಣೆ ನನ್ನ ಪಕ್ಕದ ಕ್ಷೇತ್ರಕ್ಕೆ ಸೇರಿದ್ದು, ನಾನು ಆ ಬಡಾವಣೆ ಪಡೆಯುವ ಟೈಮ್‌ನಲ್ಲಿ ಮತ್ತು ಕಟ್ಟುವ ಟೈಮ್‌ನಲ್ಲಿ ನಾನು ಬಿಡಿಎ ದ ಮೆಂಬರ್ ಆಗಿದ್ದೆ. ಅಲ್ಲಿ ರೆವಿನ್ಯೂ ಸೈಟ್‌ಗಳು ಇದ್ದವು. ನಮ್ಮ ಸುರೇಶ್‌ಕುಮಾರ್ ರವರು ಹೇಳಿದಹಾಗೆ ಅವುಗಳ ಅಲಾಟಮೆಂಟ್ ಆಯಿತು. ಅಲಾಟ್‌ಮೆಂಟ್ ಆದಮೇಲೆ ಅವರಿಗೆ ನಿಮ್ಮ ಬಿಡಿಎ ದವರು ಅಲ್ಲಿ ಮನೆಕಟ್ಟಿಕೊಳ್ಳಲು ರಕ್ಷಣೆ ಕೊಡಲಿಲ್ಲ. ರೆವಿನ್ಯೂ ಪ್ಯಾಕೆಟ್‌ನವರು ಏನು ಜಮೀನನ್ನು ತೆಗೆದುಕೊಂಡಿದ್ದರು after acquisition under Sec.6 (1) and handing over to the B.D.A. ಆದಮೇಲೆ ಈ ರೆವಿನ್ಯೂ ಮಾಲೀಕರು ಲ್ಯಾಂಡ್ ಓನರ್ ಹತ್ತಿರ ಅಗ್ರಿಮೆಂಟ್ ಮಾಡಿಕೊಂಡಿದ್ದರು. ಅಗ್ರಿಮೆಂಟ್ ಅವರಿಗೆ ಊರ್ಜಿತವಾಗಲಿಲ್ಲ. ಕೋರ್ಟಿಗೆ ಹೋದರೂ ಅವರಿಗೆ ಆಗಲಿಲ್ಲ. ಆದರೂ ನೀವು ಕೊಟ್ಟಾದ ಮೇಲೆ ಬಿಡಿಎದಿಂದ ಸೈಟು ತೆಗೆದುಕೊಂಡವರಿಗೆ ಇವರು ಮನೆ ಕಟ್ಟಲು ಬಿಡಲಿಲ್ಲ. ಇವರಿಗೆ ರಕ್ಷಣೆ ಕೊಟ್ಟು ಕಟ್ಟಿಸಬಹುದಾಗಿತ್ತು

ಈಗಲೂ ಈ ಮಾಲೀಕರು ರೆವಿನ್ಯೂ ಸೈಟ್‌ಗಳನ್ನು ಮಾರುತ್ತಿದ್ದಾರೆ. ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ರಮೇಶ್ ಸಿ.ಜಿಗಜಿಣಗಿ: ಮಾನ್ಯ ಉಪಾಧ್ಯಕ್ಷರೆ, ಒಂದು ಪ್ರಶ್ನೆಗೆ ಎಷ್ಟು ಸಮಯ ಎಂದು ನಮಗೆ ತಿಳಿಸಿದ್ದರೆ ಸಹಾಯವಾಗುತ್ತದೆ. ಒಂದು ಪ್ರಶ್ನೆಗೆ ಅರ್ಧಗಂಟೆ ಎಂದರೆ ಏನು ಇದು?

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್: ಸರ್ಕಾರಕ್ಕೆ ಕೆಲಸ ಮಾಡಲು ಒಂದು ಕಾಲಮಿತಿ ಅಗತ್ಯ ಎಷ್ಟು ದಿನಗಳಲ್ಲಿ ಈ ಕೆಲಸ ಮಾಡುತ್ತದೆ ಎಂದು ಕೇಳುತ್ತಿದ್ದೇವೆ.

ಛೇರ್ಮನ್: ಈಗ ಪ್ರಶ್ನೋತ್ತರ ಮುಗಿಯುತ್ತಾ ಬಂತು, ಇನ್ನು 4-5 ಪ್ರಶ್ನೆಗಳು ಬಾಕಿ ಇವೆ, ನಾವು ಪ್ರಶ್ನೋತ್ತರ ಪ್ರಾರಂಭ ಮಾಡಿದ್ದು, 10 ಗಂಟೆ 25 ನಿಮಿಷಕ್ಕೆ, ಇನ್ನೂ 10 ನಿಮಿಷಗಳ ಕಾಲ ಕಾಲಾವಕಾಶ ಬಾಕಿ ಇದೆ. ಅನೇಕ ಉಪ ಪ್ರಶ್ನೆಗಳನ್ನು ಕೇಳುವುದಿಲ್ಲ, ಪ್ರಾಮುಖ್ಯವಾದ ಪ್ರಶ್ನೆಗೆ ಉತ್ತರ ಕೊಡಲಿ. ಏಕೆಂದರೆ ಈ ರೆವಿನ್ಯೂ ಸೈಟ್ ಮತ್ತು ಬಿಡಿಎ ಸೈಟ್ ಇವುಗಳಿಗೆ ಒಂದುರೀತಿಯಲ್ಲಿ ಪರಿಹಾರ ಕಾಣಬೇಕಾಗಿದೆ. ಈ ಪರಿಹಾರಕ್ಕೆ ಸರ್ಕಾರ ಏನು ಪ್ರಯತ್ನ ಮಾಡುತ್ತಿದೆ ಎಂದು ಮಂತ್ರಿಗಳನ್ನು ಕೇಳೋಣ.

ಶ್ರೀ ವಿಶ್ವೇಶ್ವರ ಹೆಗಡೆ: ಈ ರೀತಿ ಉಪ ಪ್ರಶ್ನೆಗಳನ್ನು ಕೇಳುವುದರಿಂದ ಜಿಗಜಿಣಗಿಯವರಿಗೆ ಏನು ತೊಂದರೆ ಯಾಗುತ್ತದೆ ಎಂಬುದನ್ನು ಹೇಳಿಬಿಡಲಿ.

ಶ್ರೀ ಎಚ್.ಎನ್.ನಂಜೇಗೌಡ: ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಮಾನ್ಯ ಮುಖ್ಯ ಮಂತ್ರಿಗಳ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ಈ ಬಿಡಿಎದವರು ಭೂಮಿಯನ್ನು ಸ್ವಾಧೀನಮಾಡಿಕೊಳ್ಳುವಲ್ಲಿ ಒಂದು ಎಕರೆ ಇದ್ದರೂ ಸ್ವಾಧೀನ ಮಾಡಿಕೊಳ್ಳುವುದು ಅರ್ಧ ಎಕರೆ ಇದ್ದರೂ ಸ್ವಾಧೀನ ಮಾಡಿಕೊಳ್ಳುವುದು. ಒಂದು ಲೆಔಟ್ ಮಾಡಬೇಕಾದರೆ ಕನಿಷ್ಟ ಇಷ್ಟು ಎಕರೆ ಬೇಕು, ಅದು ಖುಲ್ಲಾ ಇರಬೇಕು ಎಂದು ನಿಗದಿ ಮಾಡಬೇಕು. ಅಧಿಕೃತವಾಗಿಯೋ, ಅನಧಿಕೃತವಾಗಿಯೋ ಕಟ್ಟಡಗಳನ್ನು ಕಟ್ಟುತ್ತಾರೆ, ಅವುಗಳನ್ನು ನೀವು ಒಡೆದುಕೊಂಡು ಕುಳಿತುಕೊಳ್ಳುವುದನ್ನು ಬಿಟ್ಟುಬಿಡಿ ಈಗ ದೆಹಲಿಯಲ್ಲಿ ಏನು ಮಾಡಿದ್ದಾರೆ 25 ಎಕರೆಗೆ ಕಡಿಮೆ ಇದ್ದರೆ ಸ್ವಾಧೀನಪಡಿಸಿಕೊಳ್ಳುವಂತಿಲ್ಲ ಏಕೆಂದರೆ ಲೇಔಟ್ ಮಾಡಲು ಆಗುವುದಿಲ್ಲ ಎಂದು ಹೇಳಿ ಮಾಡಿದ್ದಾರೆ. ಇಲ್ಲಿ ಬಿಡಿಎ ದವರು ಏನು ಮಾಡುತ್ತಾರೆ ಸಂಬಳೆ ಇಲ್ಲದೆ ಇದ್ದಾಗ ಒಂದು ಎಕರೆ, ಎರಡು ಎಕರೆ ಸಿಕ್ಕರೆ ಅದನ್ನು ಸ್ವಾಧೀನ ಮಾಡಿಕೊಳ್ಳುವುದು, ಅದನ್ನು ಯಾರಿಗಾದರೂ ಕೊಡುವುದು ಬಂದ ಹಣದಿಂದ ಸಂಬಳವನ್ನು ಹಂಚಿಕೊಳ್ಳುವುದು. ಆದ್ದರಿಂದ ಇದಕ್ಕೆ ಒಂದು ಮಿತಿಯನ್ನು ಹಾಕಿ, ಸಾಧ್ಯವಾದರೆ ಬಿಡಿಎಯನ್ನು ಕ್ಲೋಸ್ ಮಾಡಿ, ಕೆಲವು ಕೆಲಸಗಳನ್ನು ಹೌಸಿಂಗ್ ಬೋರ್ಡ್‌ಗೆ ವಹಿಸಿ, ಕೆಲವು ಕೆಲಸಗಳನ್ನು

ಕಾರ್ಪೊರೇಷನ್‌ಗೆ ವಹಿಸಿ. ಏಕೆಂದರೆ ಬೆಂಗಳೂರು ನಗರವನ್ನು ಅಭಿವೃದ್ಧಿಸಲು ಇನ್ನು ಸಾಧ್ಯವಿಲ್ಲ. ಆದರೆ ಒಂದು ಮಿತಿ ಇರಬೇಕು. ಇಷ್ಟು ಎಕರೆ ಖಿಲ್ಲಾ ಇದ್ದರೆ ಮಾತ್ರ ನೀವು ಲೇಔಟನ್ನು ಮಾಡಬೇಕು ಎಂದು ಬಿಡಿಎದವರಿಗೆ ನೀವು ಡೈರೆಕ್ಷನ್ ಕೊಡಬೇಕು.

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ ಬಿಡಿಎದ ಬಗ್ಗೆ ಒಂದು ದೊಡ್ಡ ಕಾದಂಬರಿಯನ್ನೇ ಬರೆಯಬಹುದು. ಮಾನ್ಯ ಗೌಡರು ಹೇಳಿದ್ದನ್ನು ಒಪ್ಪುತ್ತೇನೆ. ಇದು ಬಹಳ ದಿವಸಗಳ ರೋಗ, ಇದಕ್ಕೆ ಎಷ್ಟು ಆಳವಾದ ಬೇರುಗಳು ಇವೆ, ಇದನ್ನು ಯಾರು ಬೆಳೆಸಿದ್ದರು, ಗೊಬ್ಬರ ಯಾರು ಹಾಕಿದ್ದಾರೆ, ನೀರು ಯಾರು ಹಾಕಿದ್ದಾರೆ ಎಂಬುದೆಲ್ಲ ಗೊತ್ತಿದೆ. ಇವತ್ತು ಇದರ ಅಕ್ರಮಗಳು ಕೆಲವು blatant mistakes, ಬೇಕು ಎಂದು ಎಲ್ಲೋ ಒಂದು ಜಮೀನನ್ನು ಸ್ವಾಧೀನ ಮಾಡಿಕೊಳ್ಳುವುದು, ಅದು ಯಾರಿಗೆ ಅಲಾಟ್‌ಮೆಂಟ್ ಆಗಿರುತ್ತದೆ ಅವರಿಗೆ ಕೊಡುವುದು ಬಿಟ್ಟು, ಬೇರೆಯಾರಿಗೋ ಕೊಡುವುದು ಇಂತಹ ಅಧ್ವಾನಗಳ ವಿಪರೀತವಾಗಿವೆ. ಅದನ್ನು ಸರಿಪಡಿಸಲು ಬಿಡಿಎಯನ್ನು ಕ್ಲೋಸ್ ಮಾಡಿದರೆ ಅದಕ್ಕೆ ಪರಿಹಾರ ಆಗುವುದಿಲ್ಲ. ಇಲ್ಲಿ ಬಹಳ ವರ್ಷಗಳಿಂದ ಬಹಳಷ್ಟು ಜನ ಹಣವನ್ನು ತಿಂದುಹಾಕಿದ್ದಾರೆ. ಸೊಸೈಟಿ ಹೆಸರಿನಲ್ಲಿ ತಿಂದು ಹಾಕಿದ್ದಾರೆ, ಖಾಸಗಿ ಹೆಸರಿನಲ್ಲಿ ತಿಂದು ಹಾಕಿದ್ದಾರೆ, ಇದು ಒಂದು ದಂಧೆಯಾಗಿ ಬಿಟ್ಟಿದೆ ಈ ಊರಿನಲ್ಲಿ highest profit making profession is this. ಬಹಳ ಹಣ ತಿಂದಿದ್ದಾರೆ, ಬಿಡಿಎ ನಲ್ಲಿ ಈಗ ಬಂದಿರುವ ಆಫೀಸ್‌ರ್‌ರಿಂದ ಇದು ಆಗಿದೆ ಎಂದು ನಾನು ಹೇಳುವುದಿಲ್ಲ, ಅವರ ಕೈಯಿಂದ ಆಗುತ್ತಾ ಇದೆಯೋ ಅಥವಾ ಎಕ್ಸ್‌ಟ್ರಾ ಅಥಾರಿಟಿ ಕೊಟ್ಟು ಅಥವಾ ಗೌವರ್ನಮೆಂಟ್ ಲೆವೆಲ್‌ನಲ್ಲಿ, ಕುಳಿತುಕೊಂಡು in consultation with those experts, ದೆಹಲಿಯಲ್ಲಿ ಏನು ಮಾಡಿದ್ದಾರೆ, ಬಾಂಬೆಯಲ್ಲಿ ಏನು ಮಾಡಿದ್ದಾರೆ, ಮುಂಬೈಯಲ್ಲಿ ಕೆಲವು ಕಡೆ ಬಿಲ್ಡಿಂಗ್‌ಗಳನ್ನು ಒಡೆಯಲು ಆಗುವುದಿಲ್ಲ ಎಂದು ಹೆವಿ ಫೆನಾಲ್ಟಿ ಮಾಡಿದ್ದಾರೆ. Constructions are made unauthorisedly by individuals themselves and by the help of these institutions. ಆದ್ದರಿಂದ ಇವುಗಳನ್ನು ಒಡೆಯಲು ಆಗದೆ ಇರುವ ಕಡೆ ಮಾಡೋಣ ಹಿಡಿಯಲು ಆದರೆ ಒಡೆಸೋಣ, ಯಾರಾದರೂ ಎಲ್ಲಿಯಾದರೂ ಕಟ್ಟಿಕೊಳ್ಳಬಹುದು ಎಂದು ಇಲ್ಲ. ಮಾನ ಮರ್ಯಾದೆಯಿಂದ ಅರ್ಜಿ ಹಾಕಿ ವರ್ಷಗಟ್ಟಲೆ ಕಾದಿರುವವರನ್ನು ಬಿಟ್ಟು ಯಾವನೋ ಯಾವಾಗಲೋ ಬಂದು ಕಟ್ಟಿ ಬಿಟ್ಟಿದ್ದಾನೆ. ಅದು ಈಗ ಕಾರ್ಪೊರೇಷನ್ ಲಿಮಿಟಿಗೆ ಬಂದಿದೆ. ಆ ಏರಪೋರ್ಟ್‌ಗೆ ಹೋಗುವ ರೋಡು. ಮೊದಲು ಎಲ್ಲೋ ಇತ್ತು. ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಸ್ಯಾನಿಟರಿ ಬೋರ್ಡ್‌ನವರಿಗೆ ಕೊಟ್ಟಿದ್ದಾನೆ, ಅಲ್ಲಿ ಕೋಟ್ಯಾಂತರ ರೂಪಾಯಿಗಳ ಬಿಲ್ಡಿಂಗ್ ಕಟ್ಟಿಬಿಟ್ಟಿದ್ದಾರೆ. ಈಗ ಅವುಗಳನ್ನು ಒಡೆಸುವುದಕ್ಕೆ ಆಗುವುದಿಲ್ಲ. ಇದಕ್ಕೆ ಹಣ ಖರ್ಚುಮಾಡುವುದು ಹಾಳಾಗುತ್ತದೆ. ಅವುಗಳ ಮೇಲೆ ಹೆವಿ ಫೆನಾಲ್ಟಿ ಹಾಕುವುದಕ್ಕೆ

ಸರ್ಕಾರ ಏನಾದರೂ ವ್ಯವಸ್ಥೆ ಮಾಡಬೇಕು. ಮಾನ್ಯ ನಂಜೇಗೌಡರು ಹೇಳಿದಹಾಗೆ ಇಲ್ಲಿ ಬಹಳ ನಡೆದಿದೆ. ಅದು ನಾವು ಬಂದ ಮೇಲೆ ಗೊತ್ತಾಯಿತು ಎಂದರೆ ಅದಕ್ಕೆ ಬೇರೆ ಅರ್ಥ ಬರುತ್ತದೆ., ಹಾಗಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ಕಾಲದಿಂದ ಈ ರೋಗ ಬಂದಿದೆ. ಈ ರೋಗಕ್ಕೆ ಏನಾದರೂ ಮದ್ದು ಹುಡುಕಬೇಕು, ಸಾಧ್ಯವಾದರೆ ತಮ್ಮಗಳ ಸಲಹೆ ಪಡೆಯುತ್ತೇನೆ.

ಶ್ರೀ ಎಂ.ಶ್ರೀನಿವಾಸ್: ಇಲ್ಲಿ ಬಿಡಿಎ ಇದೆ, ಹೌಸಿಂಗ್ ಬೋರ್ಡ್ ಇದೆ ಎರಡು ಇಟ್ಟುಕೊಂಡು ತಮ್ಮ ಸರ್ಕಾರ ಎರಡು ಸಾವಿರ ಎಕರೆವರೆಗೆ ಕನ್ವರ್‌ಷನ್ ಏಕೆ ಕೊಡಬೇಕು? ನಾನು ಬಿಡಿಯ ಮೆಂಬರ್ ಆಗಿದ್ದಾಗ 50 ಸಾವಿರ ಸೈಟ್ ಕೊಟ್ಟಿದ್ದೇವೆ.

ಶ್ರೀ ಜೆ.ಹೆಚ್.ಪಟೇಲ್: ತಾವು ಬಿಡಿಎ ಮೆಂಬರ್ ಆಗಿದ್ದೀರಿ, ನಿಮಗೆ ಗೊತ್ತಿದೆ ಅಲ್ಲಿ ಏನೇನು ಆಗಿದೆ ಎಂದು. ಡಾಕ್ಟರ್ ಇದ್ದವನಿಗೆ ಗೊತ್ತು ಏನು ರೋಗ ಎಂದು. I will conslut you. ಅಲ್ಲಿ ಏನು ಆಯಿತು ಯಾವ ಕಾಲದಲ್ಲಿ ಆಯಿತು ಎನ್ನುವುದನದ್ನು ಪತ್ತೆ ಹಚ್ಚೋಣ. ಎರಡು ಸಾವಿರ ಎಕರೆ, ಮೂರು ಸಾವಿರ ಎಕರೆ ಸುಮಾರು 20ಕೋಟಿ ರೂ.ಗಳು ಅಂದಾಜು ನಾನು ಹೇಳುವುದು. ಇನ್ ವೆಸ್ಟ್‌ಮೆಂಟ್ ಆಗಿರುವುದು on nobody's land.

ಶ್ರೀ ಬಿ.ಎಸ್.ಯಡಿಯೂರಪ್ಪ: ಬಿಡಿಎ ದಲ್ಲಿ ಏನು ಆಗಿದೆ, ಏನು ಇಲ್ಲ ಎಂದು ನಮಗೆ ಗೊತ್ತಾಗುತ್ತಿಲ್ಲ. ಆದ್ದರಿಂದ ನಮ್ಮ ಇಬ್ಬರು ಶಾಸಕರನ್ನು ಅಲ್ಲಿ ಏನು ನಡೆದಿದೆ ಎಂದು ಕೇಳುವುದಕ್ಕೆ ಕಳುಹಿಸಿ, ಅದನ್ನಾದರೂ ಮಾಡಿ ಸ್ವಾಮಿ.

(ಗೊಂದಲ)

11.20 ಎ.ಎಂ.

ಶ್ರೀ ವಾಟಾಳ್ ನಾಗರಾಜ್: ಬಹಳ ಪ್ರಾಮಾಣಿಕವಾಗಿ ಅಲ್ಲಿರತಕ್ಕಂಥ ನೀತಿ ನಿಯಮಗಳ ಪ್ರಕಾರ ನಡೆದರೆ ಒಳ್ಳೆಯದು. ಆದರೆ ನಮ್ಮ ಮುಖ್ಯಮಂತ್ರಿಗಳು ಹೇಳಿದ ಪ್ರಕಾರ ಅದು ಈಗಾಗಲೇ ಬೇರುಬಿಟ್ಟುಬಿಟ್ಟಿದೆ, ಅದನ್ನು ಕೀಳಬೇಕೆಂದರೆ ಅದಕ್ಕೆ ಒಂದು ದೊಡ್ಡ ಯೂಗವನ್ನೇ ಮಾಡಬೇಕಾದ ಪರಿಸ್ಥಿತಿ ಬಂದುಬಿಟ್ಟಿದೆ. ಇದಕ್ಕೆ ಕಾರಣವೇನೆಂದರೆ ಬಿ.ಡಿ.ಎ.ಗೆ. ಪರ್ಯಾಯವಾಗಿ ಒಂದೊಂದು ಗುಂಪಿನ ಉಪ ನಗರಗಳು ನಿರ್ಮಾಣವಾಗುತ್ತಿವೆ. ಖಾಸಗಿ ಗೃಹ ನಿರ್ಮಾಣ ಸಂಸ್ಥೆಗಳವರು ಒಂದು ರೀತಿಯಲ್ಲಿ ಲೂಟಿ ಮಾಡುತ್ತಿದ್ದಾರೆ, ಇವರೇನೋ ಹೇಳಿದರು 20 ಕೋಟಿ ರೂ.ಗಳಷ್ಟು ಎಂದು, ಆದರೆ ಅದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಲೂಟಿ ನಡೆಯುತ್ತಿದೆ, ಈ ಲೂಟಿ ತಪ್ಪಿಸಬೇಕು. ಹಿಂದೆ ಸೋಮಣ್ಣ ಎಂಬುವರು ಅಧ್ಯಕ್ಷರಾಗಿದ್ದಾಗ ಹೊಸ ಹೊಸ ಬಡಾವಣೆಗಳು ಬರುತ್ತಿತ್ತು, ನಿವೇಶನಗಳನ್ನು ಹಂಚುತ್ತಿದ್ದರು, ಆದರೆ ಇವೊತ್ತು ಹೆಚ್ಚು

ಕಡಿಮೆ 15 ಸಾವಿರ ಎಕರೆ ಭೂಮಿ ಬಗ್ಗೆ ಕೋರ್ಟ್‌ನಲ್ಲಿ ವ್ಯಾಜ್ಯ ನಡೆಯುತ್ತಿದೆ, ಇದರ ಬಗ್ಗೆ ಹೊಂದಾಣಿಕೆ ಆಗುತ್ತಿಲ್ಲ, ಯಾರು ರೈತರಿದ್ದಾರೆ ಅವರ ಹತ್ತಿರ ಮಾತನಾಡಿ ಅವರಿಗೆ ಸೈಟ್‌ಗಳನ್ನು ಕೊಡತಕ್ಕಂಥದ್ದು, ಸಂಬಂಧಪಟ್ಟವರಿಗೆ ಅವರು ಕೇಳಿದಷ್ಟು ಹಣದ ವ್ಯವಸ್ಥೆಯನ್ನು ಮಾಡತಕ್ಕಂಥದ್ದು, ಆ ರೀತಿಯಲ್ಲಿ ವ್ಯವಸ್ಥೆ ಮಾಡಿದರೆ ಈ ಊರಿನಲ್ಲಿ ಹೊಸ ಬಡಾವಣೆಗಳು ನಿರ್ಮಾಣವಾಗುತ್ತವೆ. ಇಲ್ಲದಿದ್ದರೆ ಈಗಾಗಲೇ ಸುಮಾರು 80 ಸಾವಿರಕ್ಕಿಂತ ಹೆಚ್ಚು ಜನರು ಏನು ಸೈಟ್‌ಗಾಗಿ ಹಣವನ್ನು ಕಟ್ಟಿ ಕಾದು ಕುಳಿತಿದ್ದಾರೆ ಅವರಿಗೆ ನಿವೇಶನವನ್ನು ಕೊಡುವುದಕ್ಕೆ ಆಗುವುದಿಲ್ಲ, ಈ ಜನರು ಕಟ್ಟಿರುವ ಹಣಕ್ಕೆ ಬಡ್ಡಿಯನ್ನೂ ಕೂಡ ಕೊಡುತ್ತಿಲ್ಲ. ಆದುದರಿಂದ ಮುಖ್ಯಮಂತ್ರಿಗಳು ಏನು ನಿರ್ಧಾರ ಮಾಡಿದ್ದಾರೆ ಆ ರೀತಿಯಾಗಿ ಗಟ್ಟಿಯಾದಂಥವರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ಹೊಸ ರೂಪವನ್ನು ಕೊಡುವುದಕ್ಕೆ ತಾವು ಪ್ರಾರಂಭ ಮಾಡುತ್ತೀರಾ ಎಂಬ ಪ್ರಶ್ನೆಯನ್ನು ತಮ್ಮಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ.

ಛೇರ್ಮನ್: ಅವರು ಮಾಡುತ್ತಾರೆ.

ವಿಷಯ: ಪೊಲೀಸ್ ಸಿಬ್ಬಂದಿಯ ಪಾಳಿಗಳ ಸಂಖ್ಯೆಯಲ್ಲಿ ಕಡಿತ

539 (3359)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೊಲೀಸ್ ಪೇದೆಗಳಿಗೆ ಕರ್ತವ್ಯವನ್ನು ಎರಡು ಪಾಳಿಗಳಾಗಿ ಮಾಡಿರುವುದು ನಿಜವೇ?

ಆ) ಹಾಗೇ ಮಾಡಲು ಕಾರಣಗಳೇನು?

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಪೊಲೀಸರಿಗೆ ಪಾಳಿ ಪದ್ಧತಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೇ, ಪೊಲೀಸರಿಗೆ ಕರ್ತವ್ಯ ನಿರ್ವಹಿಸುವ ಸಲುವಾಗಿ ಮೂರು ಶಿಫ್ಟ್ ವ್ಯವಸ್ಥೆ ಇದೆಯೇ ಎಂದು ಕೇಳಿರುವುದಕ್ಕೆ ಪೊಲೀಸರಿಗೆ ಪಾಳಿ ಪದ್ಧತಿ ಇಲ್ಲದಿರುವುದರಿಂದ ಎರಡನೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದಿದ್ದಾರೆ. ಅಂದರೆ ಇದರರ್ಥ ಪೊಲೀಸರಿಗೆ ಶಿಫ್ಟ್ ಇಲ್ಲ, ಅವರು 24 ಗಂಟೆಗಳ ಕಾಲವೂ ಕೆಲಸ ಮಾಡಬೇಕೆಂಬುದೇ ಆಗಿದೆಯೇ? ನಾನೂ ಕೂಡ